ಅಸಲು ದಾವಾ ನಂ.146/2020
ಪಿ.ಡಬ್ಲ್ಯೂ-1

ದಿಃ 22.08.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಃ ಶ್ರೀ ಪಿ.ಬಿ.ಕೆ. ಪ್ರತಿವಾದಿ ಪರ ವಕೀಲರಿಂದಃ**

ಸಾಕ್ಷಿಗೆ ನಿಪಿ-1 ಪಹಣಿ ಪತ್ರಿಕೆಯನ್ನು ತೋರಿಸಿ, ಅದರಲ್ಲಿ ಕೋನಪ್ಪ ಚಂದಪ್ಪ ಹುಲ್ಲನ್ನವರ ರವರ ಹೆಸರು ದಾಖಲ ಇದ್ದು, ಅವರು ಯಾರು ಎಂದು ಕೇಳಲಾಗಿ, ನನ್ನ ತಂದೆ ಅವರಿಗೆ ಖರೀದಿ ಕೊಟ್ಟಿರುತ್ತಾರೆ. ನಿಪಿ-2 ರಲ್ಲಿಯ ಆಕಾರ 3 ರೂಪಾಯಿ 19 ಪೈಸಾ ಅಂತಾ ಇದೆ ಎಂದರೆ, ಸರಿ. ನಿಪಿ-2 ರಲ್ಲಿ ಸರ್ವೆ ನಂ.176 6 ಎಕರೆ 38 ಗುಂಟೆ ಅಂತಾ ಇದೆ ಎಂದರೆ, ಸರಿ. ನಿಪಿ-1 ರಲ್ಲಿ ಅಜಮಾಸ ಆಕಾರ 1 ರೂಪಾಯಿ 49 ಪೈಸಾ ಅಂತಾ ಇದೆ ಎಂದರೆ, ಸರಿ. ನಿಪಿ-2 ರಲ್ಲಿ ತಹಶೀಲ್ದಾರ ಬದಾಮಿ ಇವರ ಹುಕುಂ ನಂ. ಟಿ ಎನ್ ಸಿ ಎಸ್ ಎಸ್ ಆರ್ 254 ದಿಃ 01.05.1963 ನೇದ್ದರಿಂದ ಪರವಾನಿಗೆ ಪಡೆದುಕೊಂಡು 2 ಎಕರೆ 35 ಗುಂಟೆ ಜಮೀನನ್ನು 250 ರೂ.ಗಳಿಗೆ ಖರೀದಿ ಕೊಡಲಾಗಿದೆ ಎಂದು ಬರೆಯಲಾಗಿದೆ ಎಂದರೆ, ಸರಿ. ದಾವಾ ಆಸ್ತಿಗೆ ನನ್ನ ತಂದೆಯ ಮರಣಾನಂತರ ನಾನು ವಾರಸಾ ಮಾಡಿಸಿಕೊಂಡಿರುತ್ತೇನೆ. ನನ್ನ ತಂದೆಯವರು 1983 ರಲ್ಲಿ ಮರಣ ಹೊಂದಿರುತ್ತಾರೆ. ಆಗಿನಿಂದ ಒಂದು ವರ್ಷದ ನಂತರ ನನ್ನ ಹೆಸರಿಗೆ ವಾರಸಾ ಮಾಡಿಕೊಂಡಿರುತ್ತೇನೆ ಎಂದರೆ, ಸರಿ. ನಾನು ವಾರಸಾ ಮಾಡಿಸಿಕೊಂಡ ದಿನದಿಂದ ನನ್ನ ಹೆಸರಿನಲ್ಲಿ 4 ಎಕರೆ ಜಮೀನು ಮಾತ್ರ ಇರುತ್ತದೆ ಎಂದರೆ, ಅದು ತಪ್ಪಾಗಿರುತ್ತದೆ. ಕೋನಪ್ಪ ಚಂದಪ್ಪ ಹುಲ್ಲನ್ನವರ 2 ಎಕರೆ 35 ಗುಂಟೆ ಆಸ್ತಿಗೆ ಚಂದಪ್ಪ ಭರಮಪ್ಪ ಹುಲ್ಲನ್ನವರ ಮೃತರಾದ ವಾರಸಾ ಮಾಡಿಕೊಂಡರು ಎಂದರೆ, ಸರಿ. 1983 ಕ್ಕಿಂತ ಪೂರ್ವದಲ್ಲಿ ಚಂದಪ್ಪ ಭರಮಪ್ಪ ಹುಲ್ಲನ್ನವರ ರವರು ಸದರಿ ಆಸ್ತಿಯ ಸಾಗುವಳಿ ಮಾಡುತ್ತಿದ್ದರು ಎಂದರೆ, ಸರಿಯಲ್ಲ. ಖರೀದಿ ಪತ್ರದ ಪ್ರಕಾರ ಎಂ.ಇ. ನಂ.1654 ರ ಮೂಲಕ ಚಂದಪ್ಪ ಹುಲ್ಲನ್ನವರ ರವರ ಹೆಸರು 2 ಎಕರೆ 35 ಗುಂಟೆ ಜಮೀನಿಗೆ ದಾಖಲಾಗಿರುತ್ತದೆ ಎಂದರೆ, ಸರಿ. ಆ ಸಮಯದಲ್ಲಿ ನಾನು ನೌಕರಿ ಮಾಡುತ್ತಿದ್ದೆ ಎಂದರೆ, ಸರಿಯಲ್ಲ. ಸದರಿ ಮ್ಯುಟೇಶನ್ ಎಂಟ್ರಿಯನ್ನು ಪ್ರಶ್ನಿಸಿ ನಾನು ಎಲ್ಲಿಯೂ ಮೇಲ್ಮನವಿ ಸಲ್ಲಿಸಿಲ್ಲ. ಎಂ.ಆರ್. ನಂ.ಎಚ್29/2013-14 ನ್ನು ಪ್ರಶ್ನಿಸಿ ನಾನು ಎಲ್ಲಿಯೂ ಮೇಲ್ಮನವಿ ಸಲ್ಲಿಸಿಲ್ಲ.

ನಿಪಿ-3 ನ್ನು ನನ್ನ ದಾವೆಗೆ ಅನುಕೂಲವಾಗುವಂತೆ ಸುಳ್ಳು ಸೃಷ್ಟಿಸಿಕೊಂಡಿದ್ದೇನೆ ಎಂದರೆ, ಸರಿಯಲ್ಲ. ನಾನು ಸರ್ವೆ ಇಲಾಖೆಯವರಿಗೆ ನನ್ನ ಜಮೀನನ್ನು ಅಳತೆ ಮಾಡಲು ಅರ್ಜಿಯನ್ನು ನೀಡಿಲ್ಲ. ನಿಪಿ-3 ನ್ನು ತಯಾರು ಮಾಡಲು ಅದನ್ನು ತಯಾರಿಸಿದವರಿಗೆ ಯಾವುದೇ ಹಕ್ಕಿಲ್ಲ ಎಂದರೆ, ನನಗೆ ಗೊತ್ತಿಲ್ಲ. ನಿಪಿ-3 ರಲ್ಲಿ ದಿನಾಂಕ ನಮೂದಾಗಿಲ್ಲ ಎಂದರೆ, ಗೊತ್ತಿಲ್ಲ. ನಾನು ಹಾಜರಪಡಿಸಿದ ನಿಪಿ-1 ರಿಂದ 3 ದಾಖಲಾತಿಗಳು ನಾನು 4 ಎಕರೆ ಜಮೀನಿಗೆ ಮಾಲಕನಿರುತ್ತೇನೆ, ಪ್ರತಿವಾದಿಯರು 2 ಎಕರೆ 35 ಗುಂಟೆ ಜಮೀನಿಗೆ ಮಾಲಕರಿರುತ್ತಾರೆ ಎಂದು ತೋರಿಸುತ್ತದೆ ಎಂದರೆ, ಸರಿಯಲ್ಲ. ಪ್ರತಿವಾದಿಯು 4 ಎಕರೆ ಜಮೀನಿನಲ್ಲಿ ಸಜ್ಜೆ ಬೆಳೆಯನ್ನು ಹಾಕಿದ್ದಾರೆ ಎಂದರೆ, ಸರಿಯಲ್ಲ. ಸಾಕ್ಷಿಗೆ ತಾನು ಹಾಜರಪಡಿಸಿದ ಹಾತ್ ನಕಾಶೆಯನ್ನು ತೋರಿಸಿ, ಅಲ್ಲಿ ಒಂದು ಬದು ಇದೆ ಎಂದರೆ, ಸರಿಯಲ್ಲ. ಆ ಬದುವಿನ ಉತ್ತರಕ್ಕೆ ಪ್ರತಿವಾದಿಯರ ಜಮೀನು, ದಕ್ಷಿಣ ದಿಕ್ಕಿಗೆ ನನ್ನ ಜಮೀನು ಇರುತ್ತದೆ ಎಂದರೆ, ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದರಿಂದ, ಕಾಲಾವಕಾಶ ನೀಡಿ ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ. ನನ್ನ ಸಮಕ್ಷಮ

ಸಹಿ/-
ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.
ಬದಾಮಿ.